146 ನಿ-72 ಕ್ರ-38

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಸಂಬಂಧಿಸಿದಂತೆ ಉತ್ತರ.

* * * * *

ವಿಷಯ:-

ಬೆಂಗಳೂರಿನ ಸರ್.ಸಿ.ವಿ. ರಾಮನ್‌ನಗರ ವಿಧಾನಸಭಾ ಕ್ಷೇತ್ರ, ವಾರ್ಡ್ ಸಂಖ್ಯೆ: 79, ಕದಿರನಪಾಳ್ಯ, ಇಂದಿರಾನಗರ, ಬಿ.ಬಿ.ಎಂ.ಪಿ ವಸತಿ ಗೃಹವು ಸುಮಾರು 50-60 ವರ್ಷಗಳಷ್ಟು ಹಳೆಯ ಕಟ್ಟಡವಾಗಿದ್ದು, ಇಲ್ಲಿ ಸುಮಾರು 126 ಮನೆಗಳಿದ್ದು ಅದರಲ್ಲಿ ಪೌರಕಾರ್ಮಿಕರು ವಾಸ ಮಾಡುತ್ತಿರುತ್ತಾರೆ. ಸದರಿ ಕಟ್ಟಡವು ಯಾವ ಕ್ಷಣದಲ್ಲಾದರೂ ಬೀಳುವ ಹಂತದಲ್ಲಿದ್ದು, ಪೌರಕಾರ್ಮಿಕರು ತಮ್ಮ ಜೀವನದ ಹಂಗನ್ನು ತೊರೆದು ವಾಸಿಸಲು ಯೋಗ್ಯವಾಗಿಲ್ಲದ ಕಟ್ಟಡದಲ್ಲಿ ಜೀವನವನ್ನು ನಿರ್ವಹಣೆ ಮಾಡುತ್ತಿರುವುದು ಶೋಚನೀಯ ವಿಚಾರವಾಗಿದೆ. ಸದರಿ ಬಿ.ಬಿ.ಎಂ.ಪಿ ವಸತಿ ಗೃಹವನ್ನು ತೆರವುಗೊಳಿಸಿ, ಪೌರಕಾರ್ಮಿಕರಿಗೆ ಅನುಕೂಲವಾಗುವಂತೆ ವಸತಿ ಗೃಹಗಳನ್ನು ನಿರ್ಮಾಣ ಮಾಡುವ ಕುರಿತು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯ ಬಯಸುತ್ತೇನೆ.

ಉತ್ತರ:-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 79, ಸರ್ವಜ್ಞನಗರ ವಾರ್ಡ್, ಕದಿರಯ್ಯನಪಾಳ್ಯದಲ್ಲಿ ಸುಮಾರು 40 ವರ್ಷಗಳ ಹಿಂದೆ ಪಾಲಿಕೆಯ ವತಿಯಿಂದ ಸುಮಾರು 7,000 (ಏಳು ಸಾವಿರ) ಚದರ ಮೀಟರ್‌ಗಳ ವಿಸ್ತೀರ್ಣದಲ್ಲಿ ನೆಲ, ಮೊದಲನೇ ಮತ್ತು ಎರಡನೇ ಮಹಡಿಯುಳ್ಳ ಪ್ರತಿ ಮಹಡಿಯಲ್ಲಿ 6 ಮನೆಗಳಂತೆ ಪ್ರತಿ ಬ್ಲಾಕ್‌ಗೆ 18 ಮನೆಗಳಂತೆ ಒಟ್ಟು 7 ಬ್ಲಾಕ್‌ಗಳಲ್ಲಿ 126 ಮನೆಗಳ ನಿರ್ಮಾಣ ಮಾಡಲಾಗಿರುತ್ತದೆ.

ಸದರಿ ಮನೆಗಳನ್ನು ಪಾಲಿಕೆಯ ಪೌರ ಕಾರ್ಮಿಕರು, ಡಿ-ಗ್ರೂಪ್ ನೌಕರರು, ಗ್ಯಾಂಗ್‌ಮೆನ್, ಹೆಡ್ ಗ್ಯಾಂಗ್‌ಮೆನ್, ಕಾಮಗಾರಿ ಪರಿವೀಕ್ಷಕರು, ದ್ವಿತೀಯ ದರ್ಜೆ ಸಹಾಯಕರು, ಪ್ರಥಮ ದರ್ಜೆ ಸಹಾಯಕರು ಇತ್ಯಾದಿ ಪಾಲಿಕೆಯ ನೌಕರರು / ಸಿಬ್ಬಂದಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ.

ಸದರಿ ಪಾಲಿಕೆಯ ವಸತಿ ಗೃಹದಲ್ಲಿ ವಾಸಿಸುತ್ತಿರುವ ಅರ್ಹ ನಿವಾಸಿಗಳಿಗೆ ಒಟ್ಟಾರೆ ಜಾಗವನ್ನು ವಿಂಗಡಣೆ ಮಾಡಿ ಖಾಲಿ ಜಾಗವನ್ನು ಹಂಚಿಕೆ ಮಾಡಲು ದಿನಾಂಕ: 28-05-2014ರ ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಲಾಗಿದ್ದು, ಅದರಂತೆ ಪಾಲಿಕೆಯು ದಿನಾಂಕ: 04-09-2017ರಂದು ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತದೆ. ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಲವೊಂದು ಅಂಶಗಳಿಗೆ ಮಾಹಿತಿಯನ್ನು ಒದಗಿಸುವಂತೆ ಪಾಲಿಕೆಯ ಮುಖ್ಯ ಆಯುಕ್ತರನ್ನು ಕೋರಲಾಗಿರುತ್ತದೆ. ಕೋರಿರುವ ಮಾಹಿತಿಯು ಸ್ವೀಕೃತಗೊಂಡ ನಂತರ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ನೀಡಲು ನಿಯಮಾನುಸಾರ ಕ್ರಮವಹಿಸಲಾಗುವುದು.

---

**ಸಂಖ್ಯೆ: ನಅಇ 16 ಬಿಬಿಎಸ್ 2022(ಇ)**

(ಬಸವರಾಜ ಬೊಮ್ಮಾಯಿ)

ಮುಖ್ಯಮಂತ್ರಿ